## 1 ವರದಿಯನ್ನೊಪ್ಪಿಸುವುದು

2006–07 ನೇ ಸಾಲಿನ ಹಕ್ಕುಬಾಧ್ಯತೆಗಳ ಸಮಿತಿಯ ಮೂರನೆಯ ವರದಿ

ಶ್ರೀ ಜಿ ಬಸವಣ್ಣೆಪ್ಪ (ಹೊಳೆಹೊನ್ನೂರು) ಮಾನ್ಯ ಅಧ್ಯಕ್ಷರೆ, 2006–07ನೇ ಸಾಲಿನ ಹಕ್ಕು ಬಾಧ್ಯತೆಗಳ ಸಮಿತಿಯ 3ನೇ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ

ಅಧ್ಯಕ್ಷರು ಮಂಡಿಸಲಾಯಿತು

**ಶ್ರೀ ಜೆ ಸಿ ಮಾಧುಸ್ವಾಮಿ** ತಾವು ಭಾಷಣ ಮಾಡಲಿಕ್ಕೆ ನನ್ನನ್ನು ಕರೆದಿದ್ದಕ್ಕೆ ತಮ್ಮನ್ನು ಅಭಿನಂದಿಸುತ್ತೇನೆ

**ಶ್ರೀ ವಾಟಾಳ್ ನಾಗರಾಜ್** ಮಾನ್ಯ ಅಧ್ಯಕ್ಷರೆ, ನಾನು ತಮ್ಮನ್ನು ಕೇಳಿದ್ದೆ ನನ್ನ ಸ್ನೇಹಿತರಿಗೂ ನಾನು ಮನವಿ ಮಾಡುತ್ತಿದ್ದೇನೆ

**ಶ್ರೀ ಜೆ ಸಿ ಮಾಧುಸ್ವಾಮಿ** ಸನ್ಮಾನ್ಯ ಯಡಿಯೂರಪ್ಪನವರು 2007–08ನೇ ಸಾಲಿಗೆ

**ಶ್ರೀ ವಾಟಾಳ್ ನಾಗರಾಜ್** ದಯವಿಟ್ಟು, ಒಂದ್ನಿಮಿಷ ಯೀಲ್ಡ್ ಆಗಿ

**ಅಧ್ಯಕ್ಷರು** ಅವರು yield ಆಗದಿದ್ದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ

**ಶ್ರೀ ಜೆ ಸಿ ಮಾಧುಸ್ವಾಮಿ** ನನ್ನ ಭಾಷಣಕ್ಕೆ ಪೂರಕವಾಗಿ ಮಾತನಾಡುವುದಾದರೆ ನಾನು yield ಆಗುತ್ತೇನೆ ಬೇರೆ ಏನಾದರೂ ಮಾತನಾಡುವುದಾದರೆ, (ಗೊಂದಲ)

**ಅಧ್ಯಕ್ಷರು** ಮಾನ್ಯ ವಾಟಾಳ್‌ರವರೆ, ತಾವು ಕುಳಿತುಕೊಳ್ಳಿ, ತಮಗೆ ನಂತರ ಅವಕಾಶ ಕೊಡುತ್ತೇನೆ

**ಶ್ರೀ ಜೆ ಸಿ ಮಾಧುಸ್ವಾಮಿ** ನಾನು ಇನ್ನೂ ಸಹ ಮಾತು ಪ್ರಾರಂಭವೇ ಮಾಡಲಿಲ್ಲ ನನ್ನ ಬಗ್ಗೆ ಮಾತನಾಡುತ್ತಾರೆ, ನನ್ನ ಪರವಾಗಿ ಮಾತನಾಡುತ್ತಾರೋ, ವಿರೋಧವಾಗಿ ಮಾತನಾಡುತ್ತಾರೋ, ನನಗೇನು ಗೊತ್ತು ? ನಾನೇಕೆ yield ಅಗಲಿ ? ಬೇರೆ ವಿಚಾರ raise ಮಾಡಲು ಅನುಮತಿಸುವುದು ನಿಮಗೆ ಬಿಟ್ಟಿದ್ದು

**ಶ್ರೀ ವಾಟಾಳ್ ನಾಗರಾಜ್** ನಾನು ಯಾವತ್ತೂ ಪರವೇ ಹೊರತು ವಿರುದ್ಧವಲ್ಲ

**ಅಧ್ಯಕ್ಷರು** ನಾನು ಅವಕಾಶ ಕೊಡುತ್ತೇನೆ ತಾವು ಕುಳಿತುಕೊಳ್ಳಿ ಅವರು ಪ್ರಾರಂಭ ಮಾಡಲಿ ಮಾಧುಸ್ವಾಮಿಯವರೇ, ಚರ್ಚೆ ಪ್ರಾರಂಭ ಮಾಡಿ ಎಂದು ನಿಮಗೇ

ಹೇಳಿದ್ದು

**ಶ್ರೀ ಜೆ ಸಿ ಮಾಧುಸ್ವಾಮಿ** ನನಗೆ ಪ್ರಾರಂಭ ಮಾಡಿ ಎಂದು ಹೇಳಿದ್ದಾರೆ I am sorry (ಗೊಂದಲ) ಯರಿಗಾದರೂ ಒಬ್ಬರಿಗೆ ಹೇಳಿ ಸರ್

**ಶ್ರೀ ವಾಟಾಳ ನಾಗರಾಜ್** ಸರ್ ನಾನೇನು ಮಾಡಬೇಕು ಈಗ ?

ಅಧ್ಯಕ್ಷರು ಮಾದುಸ್ವಾಮಿಯವರೆ, ಅವರೇನೋ ಶೂನ್ಯ ವೇಳೆಯಲ್ಲಿ ಯಾವುದೋ ವಿಷಯವನ್ನು ಪ್ರಸ್ತಾಪ ಮಾಡುತ್ತೇನೆಂದು ಹೇಳಿದ್ದಾರೆ

**ಶ್ರೀ ಜೆ ಸಿ ಮಾಧುಸ್ವಾಮಿ** ಅದು ದಿವಸವೂ ಇದ್ದದ್ದೇ ಅಲ್ಲವೇ ಸರ್ ಹೊಸದೇನಾದರೂ ಇದ್ದರೆ ಹೇಳಲಿ

**ಶ್ರೀ ಜಿ ವಿ ಶ್ರೀರಾಮರೆಡ್ಡಿ** ನಾವು ಕೇಳಿದರೆ question hour ಅದಮೇಲೆ zero hour ಎಂದು ಹೇಳುತ್ತೀರಿ

**ಶ್ರೀ ಜೆ ಸಿ ಮಾಧುಸ್ವಾಮಿ** zero hour ಅನ್ನು ಮೊದಲೇ ಹೇಗೆ ತೆಗೆದುಕೊಳ್ಳುತ್ತೀರಿ ?

**ಅಧ್ಯಕ್ಷರು** ಹೌದು ಎಲ್ಲರಿಗೂ ಅದೇ ತರಹ ಹೇಳಿರುವುದು

**ಶ್ರೀ ಜೆ ಸಿ ಮಾಧುಸ್ವಾಮಿ** ಇರಲಿ, question hour ಆಗುವವರೆಗಾದರೂ ಇರಿ

**ಅಧ್ಯಕ್ಷರು** One should fall in line ವಾಟಾಳ್ ನಾಗರಾಜ್‌ರವರೇ, ನೀವು ಆಮೇಲೆ ಮಾತನಾಡಿ ಅವರು ಮೊದಲು ಮಾತನಾಡಲಿ

**ಶ್ರೀ ವಾಟಾಳ್ ನಾಗರಾಜ್** ನಾನು ಒಂದೇ ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ

**ಅಧ್ಯಕ್ಷರು** ಒಬ್ಬರಿಗೆ ಅವಕಾಶ ಕೊಟ್ಟರೆ ಎಲ್ಲರೂ ಅವಕಾಶ ಕೇಳುತ್ತಾರೆ ಬೇರೆಯವರು ಸಹ ಶೂನ್ಯ ವೇಳೆಯಲ್ಲಿ ಮಾತನಾಡುವುದಕ್ಕೇ ಕೇಳಿಕೊಂಡಿದ್ದಾರೆ ತಾವು ಕುಳಿತುಕೊಳ್ಳಿ ನಿಮಗೆ ಆಮೇಲೆ ಅವಕಾಶ ಕೊಡುತ್ತೇನೆ

## 2 ವಿತ್ತೀಯ ಕಾರ್ಯಕಲಾಪ
## 2007–2008ನೇ ಸಾಲಿನ ಬೇಡಿಕೆಗಳ ಮೇಲೆ ಚರ್ಚೆ

**ಶ್ರೀ ಜೆ ಸಿ ಮಾಧುಸ್ವಾಮಿ** (ಚಿಕ್ಕನಾಯಕನಹಳ್ಳಿ) ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು 2007–08 ನೇ ಸಾಲಿನ ಆಯವ್ಯಯವನ್ನು ಮಂಡಿಸಿದ್ದರು ಇದರಲ್ಲಿ ಅವರು ಸುಮಾರು ಮೂರು ತಿಂಗಳುಗಳ ಕಾಲ vote an account ತೆಗೆದುಕೊಂಡು ಸರ್ಕಾರ ನಡೆಸಿ ಈ ಸಭೆಯಲ್ಲಿ ಅಭಿಯಾಚನೆಗಳನ್ನು ಮಂಡಿಸಿ ಬೇಡಿಕೆಗಳನ್ನು ಇಲಾಖಾವಾರು ಇಡುತ್ತಿದ್ದಾರೆ ಇದರಲ್ಲಿ ಭಾಗವಹಿಸಿ